ನ್ಯೂಜಿಲೆಂಡ್‌ನ ಸೌಂದರ್ಯಶಿಖರಗಳಲ್ಲಿ ಮಿಲ್‌ಫೋರ್ಡ್ ಸೌಂಡ್ ಮುಖ್ಯವಾದುದು. ಹಿಮನದಿಗಳ ಸವಕಳಿಯಿಂದ ರೂಪುಗೊಂಡ ಭೂದೃಶ್ಯಗಳೇ ಸಹೃದಯರ ಮೈಮನಗಳಲ್ಲಿ ಮಿಂಚಿನಹೊಳೆ ಹರಿಸಬಲ್ಲವು. ಭೋರ್ಗರೆವ ಜಲಪಾತಗಳ ಜೊತೆಗೆ ನೀರಿನಾಳದ ಕೌತುಕಗಳನ್ನು ಕಣ್ತುಂಬಿಕೊಳ್ಳುವ ಅವಕಾಶ ಅಲ್ಲಿದೆ. ಮಿಲ್‌ಫೋರ್ಡ್ ಕಣಿವೆಯಲ್ಲಿ ಸಂಚರಿಸುವುದೇ ಜೀವಮಾನದ ರೋಚಕ ಅನುಭವಗಳಲ್ಲಿ ಒಂದಾಗಬಹುದು.

ಪೆಸಿಫಿಕ್ ಸಾಗರದ ನೈರುತ್ಯ ಸೆರಗಿನ ಅಸಂಖ್ಯಾತ ದ್ವೀಪಗಳ ಗುಚ್ಛವೇ ಓಷಾನಿಯಾ. ಅದಕ್ಕೆ ಮತ್ತೊಂದು ಹೆಸರು ನ್ಯೂಜಿಲೆಂಡ್. ಭುಸುಗುಡುವ ಅಗ್ನಿಪರ್ವತ, ದಟ್ಟಕಾನನ ಹಾಗೂ ಒರಟು ಶಿಖರಗಳ ಈ ನಾಡು ಶತಮಾನಗಳ ಕಾಲ ಮನುಷ್ಯನ ಕಣ್ಣಿಗೆ ಬೀಳದೆ ಅಜ್ಞಾತವಾಗಿಯೇ ಉಳಿದಿತ್ತು. ಮಾನವ ಹೆಜ್ಜೆ ಇರಿಸಿದ ಭೂಗ್ರಹದ ಕಟ್ಟಕಡೆಯ ತಾಣವೆಂದು ಇದನ್ನು ಕರೆಯುತ್ತಾರೆ. ಶ್ರೇಷ್ಠ ಜೀವನಮಟ್ಟ, ಅತ್ಯಧಿಕ ಆದಾಯ ಮತ್ತು ಪ್ರಕೃತಿ ಸೌಂದರ್ಯ ಈ ನಾಡಿನಲ್ಲಿ ಹೆಸರುವಾಸಿ. ಸಾಹಿತಿ ರುಡ್‌ಯಾರ್ಡ್ ಕಿಪ್ಲಿಂಗ್‌ರವರ ಪ್ರಕಾರ ಭೂಮಿಯ ಮೇಲೆ ಸ್ವರ್ಗವೊಂದಿದ್ದರೆ ಅದು ನ್ಯೂಜಿಲೆಂಡ್.

ಅಪರೂಪದ ಈ ದೇಶವನ್ನು ನೋಡಲು ಕಳೆದ ವರ್ಷ ಆಕ್ಲೆಂಡಿಗೆ ತೆರಳಿ ಕೆಲವು ದಿನ ಕಳೆದಿದ್ದೆ. ಅಲ್ಲಿಂದ ನೇರವಾಗಿ ತೆರಳಿದ್ದು ಕ್ವೀನ್ಸ್‌ಟೌನ್‌ಗೆ. ಆಕರ್ಷಕ ನೀಲಿಬಣ್ಣದ ವಾಕಾಟಿಪು ಸರೋವರದ ದಂಡೆಯ ಮೇಲೆ ಹರಡಿರುವ ಪುಟ್ಟ ನಗರವದು. ಸರೋವರ ತೀರದ ವಾಟರ್‌ಫ್ರಂಟ್‌ನಲ್ಲಿ ಭರ್ರೋ ಎಂದು ಓಡಾಡುವ ಜೆಟ್‌ರೈಡರ್ಸ್, ಗೊಂಡೋಲಾರೈಡರ್ಸ್, ಬೋಟು, ಕ್ರೂಸು, ಲಾಂಚು ಪ್ರವಾಸಿಗರನ್ನು ಸಂತಸದ ಕಡಲಲ್ಲಿ ಮುಳುಗಿಸಿದ್ದವು. ನನಗಂತೂ ಮಿಲ್‌ಫೋರ್ಡ್ ಸೌಂಡ್ ಯಾವಾಗ ನೋಡುತ್ತೇನೋ ಎಂಬ ಕುತೂಹಲ. ಅಲ್ಲಿಂದ ಎರಡನೇ ದಿನವೇ ಬೆಳಿಗ್ಗೆ ಉಪಹಾರ ಮುಗಿಸಿ 294 ಕಿ.ಮೀ. ದೂರದ ಮಿಲ್‌ಫೋರ್ಡ್‌ಸೌಂಡ್‌ಗೆ ಹೊರಟೇಬಿಟ್ಟೆವು.

ಬಲಗಡೆ ಕಣ್ಣು ಸೋಲುವವರೆಗೂ ಚಾಚಿಕೊಂಡಿದ್ದ ನೀಲಿ ಸರೋವರ, ಎಡಗಡೆ ಗಿರಿಸಾಲು, ಹಚ್ಚಹಸಿರ ವನರಾಶಿ ನಡುವೆ ಪಯಣಿಸುವುದು ರೋಮಾಂಚಕ ಅನುಭವ. ಸುಮಾರು ಎರಡು ತಾಸು ಕಳೆಯುವಷ್ಟರಲ್ಲಿ, ಫೋರ್ಡ್ ರಾಷ್ಟ್ರೀಯ ಉದ್ಯಾನವನ ಟೇಅನು ಎಂಬ ಸ್ಥಳದಲ್ಲಿ ಬಸ್ಸು ನಿಂತಿತು. ವಾಹನಗಳಿಗೆ ಇಂಧನ ತುಂಬಿಸುವ ಏಕೈಕ ಪೆಟ್ರೋಲ್ ಪಾಯಿಂಟ್ ಅದು; ಜೊತೆಗೆ ಕಾಫಿ–ಟೀ ಕುಡಿಯುವ ವಿಶ್ರಾಂತಿ ಸ್ಥಳವೂ ಹೌದು. ಅಲ್ಲಿಂದ ಹೊರಟರೆ ಮುಂದಿನ ಮಿಲ್‌ಫೋರ್ಡ್ ಹೆದ್ದಾರಿಯಂತೂ ಅಮೋಘ.

ಬೆಳ್ಳಿಬಿಳಿದಂಥ ಹಿಮಗಿರಿಗಳು, ತೇಲುವಮೋಡ, ಹರಿಯುವ ನದಿ, ತೊರೆ, ಸುರಿವ ಜಲಪಾತಗಳ ನೋಟ ಪ್ರವಾಸಿಗರಿಗೆ ಮೈನವಿರೇಳಿಸುತ್ತವೆ. ಬೈಕು, ಸೈಕಲ್ ಸವಾರರ ದಂಡು. ಚಾರಣಿಗರು ಉತ್ಸಾಹದ ಬುಗ್ಗೆಗಳಾಗಿ ದಾರಿಯುದ್ದಕ್ಕೂ ಕಾಣುತ್ತಿದ್ದರು. ಪ್ರಯಾಣದಲ್ಲಿ ಮೂರುಗಂಟೆ ಸಮಯ ಸರಿದಿದ್ದೇ ತಿಳಿಯಲಿಲ್ಲ.

ಮಿಲ್‌ಫೋರ್ಡ್ ಸೌಂಡ್ ತಲುಪಲು ಇನ್ನೂ ಅರ್ಧ ತಾಸು ಸಮಯ ಇರುವಾಗಲೇ ಏಕಶಿಲಾ ಬೆಟ್ಟದಲ್ಲಿ ಕೊರೆದ ಹ್ಯೂಮರ್ ಸುರಂಗ ಎದುರಾಯಿತು. ಒಂದೂವರೆ ಕಿ.ಮೀ. ಉದ್ದದ ಸುರಂಗ ದಾಟಲು ವಾಹನಗಳು ನೂರಾರು ಸಂಖ್ಯೆಯಲ್ಲಿ ಅಲ್ಲಿ ಜಾಮ್ ಆದಂತೆ ಸಾಲುಗಟ್ಟಿದ್ದವು.

ನಮ್ಮ ಗೈಡ್, ಹ್ಯೂಮರ್ ಸುರಂಗ ನಿರ್ಮಾಣದ ರೋಚಕ ಕಥನವನ್ನು ಬಿಚ್ಚಿಟ್ಟರು. ವಿಲಿಯಮ್ ಹ್ಯೂಮರ್ ಹಾಗೂ ಆತನ ಗೆಳೆಯ ಜಾರ್ಜ್ ಬರ್ಬರ್ ಇಬ್ಬರೂ 1889ರ ಜನವರಿ 27ರಂದು, ಹ್ಯೂಮರ್ ಹೆಸರಿನ ಕೋವಿ (Saddle) ಪತ್ತೆಮಾಡಿದರು. ಅದು ಡರ್ರೆನ್ ಪರ್ವತ ಶ್ರೇಣಿಯಲ್ಲಿತ್ತು. ನ್ಯೂಜಿಲೆಂಡ್‌ನ ಐದು ಜನ ಸಾಹಸಿಗರು ಸುರಂಗ ಕೊರೆಯಲು ಮುಂದಾದರು, ಡರ್ರೆನ್ ಪರ್ವತದ ಮೇಲೆ ಟೆಂಟ್ ಹಾಕಿದರು. ಮೈಕೊರೆವ ಚಳಿ, ಬಿರುಗಾಳಿ, ಎಡೆಬಿಡದ ಮಳೆಯಲ್ಲಿ

